# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2572

02. ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

03. ಉತ್ತರಿಸುವ ದಿನಾಂಕ : 24.03.2022

04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪೊಲೀಸ್ ಪೇದೆಯಿಂದ ಮುಖ್ಯಪೇದೆ, ಮುಖ್ಯ ಪೇದೆಯಿಂದ ಎ.ಎಸ್.ಐ ರವರಿಗೆ ಸರಿಯಾಗಿ ವಾರದ ರಜೆ ನೀಡದೆ, ಕೆಲವು ಠಾಣೆಗಳಲ್ಲಿ ಸಿಬ್ಬಂದಿಗಳು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೆಚ್.ಸಿ ಮತ್ತು ಪಿ.ಸಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿಯವರುಗಳು ಹಗಲು ಮತ್ತು ರಾತ್ರಿ ಬೀಟ್ ಕರ್ತವ್ಯ ಹಾಗೂ ಹೆಚ್ಚಿನದ್ದಾಗಿ ಹೊರಾಂಗಣ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಅವರ ಮಾನಸಿಕ ಸ್ಥಿತಿಯನ್ನು ವೃದ್ಧಿಸಲು ಅನುಕೂಲವಾಗುವಂತೆ ಸದರಿ ಸಿಬ್ಬಂದಿಯವರುಗಳಿಗೆ ವಾರದ ರಜೆಯನ್ನು ನೀಡಲಾಗುತ್ತಿದೆ.<br><br>ಎ.ಎಸ್.ಐ ಹುದ್ದೆಯು ಅಧಿಕಾರಿ ದರ್ಜೆಯದ್ದಾಗಿರುವುದರಿಂದ ಸದರಿಯವರುಗಳಿಗೆ ಅವರುಗಳ ಕೆಲಸದ ಒತ್ತಡದ ಅನುಸಾರವಾಗಿ ವಾರದ ರಜೆಯನ್ನು ನೀಡಲಾಗುತ್ತದೆ. |
| ಆ) | ಅಗ್ನಿಶಾಮಕ ದಳದಲ್ಲಿ ನೀಡುವಂತೆ ಎ.ಎಸ್.ಐ ಹಾಗೂ ಪಿ.ಎಸ್.ಐ ಹುದ್ದೆಯವರಿಗೆ ವರ್ಷದಲ್ಲಿ ಒಂದು ತಿಂಗಳ ಸಾರ್ವತ್ರಿಕ ರಜಾ ವೇತನ ನೀಡುವಂತೆ ಗೃಹ ಇಲಾಖಾ ಎ.ಎಸ್.ಐ ಹಾಗೂ ಪಿ.ಎಸ್.ಐ ಹುದ್ದೆಯವರಿಗೆ ಒಂದು ತಿಂಗಳ ಸಾರ್ವತ್ರಿಕ ರಜಾ ವೇತನ ನೀಡದಿರಲು ಕಾರಣಗಳೇನು; (ವಿವರ ನೀಡುವುದು) | ಎ.ಎಸ್.ಐ ಹುದ್ದೆಯಿಂದ ಎಸ್.ಪಿ (ನಾನ್–ಐಪಿಎಸ್) ಹುದ್ದೆಗಳ ವರೆಗಿನ ಅಧಿಕಾರಿ / ಸಿಬ್ಬಂದಿಯವರುಗಳಿಗೆ 30 ದಿನಗಳ ಪತ್ರಾಂಕಿತ ರಜಾ ವೇತನ ಮಂಜೂರು ಮಾಡುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ. |
| ಇ) | ಅಗ್ನಿಶಾಮಕ ದಳದಲ್ಲಿ ಪೊಲೀಸ್ ಪೇದೆಯಿಂದ ಮುಖ್ಯ ಪೇದೆಯವರಿಗೆ ವಾರದ ಭತ್ಯೆಯನ್ನು ರೂ.400/– ನೀಡಲಾಗುತ್ತಿದ್ದು, ಗೃಹ ಇಲಾಖೆಯ ಪೊಲೀಸ್ ಪೇದೆಯಿಂದ ಮುಖ್ಯ ಪೇದೆಯವರಿಗೆ ವಾರದ ಭತ್ಯೆ ಕೇವಲ ರೂ.200/– ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ತುರ್ತು ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ವಾರದ ರಜೆಯಿಂದ ವಂಚಿತರಾಗುವ ಸಿಬ್ಬಂದಿಯವರುಗಳಿಗೆ ಮಾತ್ರ ವಾರದ ರಜೆ ಭತ್ಯೆಯನ್ನು ನೀಡಲಾಗುತ್ತಿರುವುದರಿಂದ ಮತ್ತು ಬಹುತೇಕ ಎಲ್ಲಾ ಸಿಬ್ಬಂದಿಯವರುಗಳು ವಾರದ ರಜೆಯನ್ನು ಪಡೆಯುತ್ತಿರುವುದರಿಂದ ವಾರದ ಭತ್ಯೆಯನ್ನು ಪರಿಷ್ಕರಿಸುವ ಪ್ರಸ್ತಾವನೆ ಇರುವುದಿಲ್ಲ. |
| ಈ) | ಪೊಲೀಸ್ ಪೇದೆಗಳಿಗೆ ರೂ.3,000/– ಕಷ್ಟ ಪರಿಹಾರ ಭತ್ಯೆಯನ್ನು ನೀಡಲಾಗುತ್ತಿದ್ದು, ಆದರೆ ಮುಖ್ಯಪೇದೆ ಹಾಗೂ ಎ.ಎಸ್.ಐ ಹುದ್ದೆಯವರಿಗೆ ರೂ.2,000/– ಮಾತ್ರ ಕಷ್ಟ ಪರಿಹಾರ ಭತ್ಯೆ ನೀಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರ ಆದೇಶ ಸಂ: ಆಇ 6 ಎಸ್ಆರ್‌ಪಿ 2019, ದಿನಾಂಕ:18.10.2019ರಲ್ಲಿ ಕಷ್ಟ ಪರಿಹಾರ ಭತ್ಯೆಯನ್ನು ಹುದ್ದೆಗಳ ಅನುಸಾರ ನಿಗದಿ ಮಾಡಲಾಗಿರುತ್ತದೆ. ಅಲ್ಲದೆ, ಹೆಚ್.ಸಿ ಮತ್ತು ಎ.ಎಸ್.ಐ ಹುದ್ದೆಗಳ ವೇತನ ಶ್ರೇಣಿಗಳು ಪಿ.ಸಿ ಹುದ್ದೆಗಳಿಗಿಂತ ಹೆಚ್ಚಿರುವುದರಿಂದ, ನಿಗದಿಪಡಿಸಿರುವ ಕಷ್ಟ ಪರಿಹಾರ ಭತ್ಯೆ ಸಮಂಜಸವಾಗಿರುತ್ತದೆ. |
| ಉ) | ಸಾರ್ವತ್ರಿಕ ರಜಾ ವೇತನ, ಕಷ್ಟ ಪರಿಹಾರ ಭತ್ಯೆ ಮತ್ತು ವಾರದ ಭತ್ಯೆಯಲ್ಲಿನ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಅಂತಹ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ. |

HD/34/PHS/2022

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು